# <u>ಆಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಆಳಂದ</u>

ಸಿ.ಸಿ.ನಂ.1904/2023

**ಸರ್ಕಾರದ ಪರವಾಗಿ ನರೋಣಾ ಪೋಲಿಸ ಠಾಣೆ**

**ವಿರುದ್ಧ**

1. ಸೈಯದ್ ದಸ್ತಗಿರ ತಂದೆ ಸೈಯದ್ ಫಕ್ರೋದ್ದಿನ್,
   ವಃ 54 ವರ್ಷ, ಉಃ ಒಕ್ಕಲುತನ,

2. ಸೈಯದ್ ನಸ್ರೋದ್ದಿನ್ ತಂದೆ ಸೈಯಾದ್ ಇನಾಮದಾರ - **(Split-Up)**
   ವಃ 26 ವರ್ಷ, ಉಃ ಕೂಲಿ,

ಇಬ್ಬರು ಸಾಃ ನರೋಣಾ, ಹಾಲಿವಾಸಃ ಚುನ್ನಾ ಭಟ್ಟಿ, ಮಹೆಬೂಬ ನಗರ,
ಕಲಬುರಗಿ.

## <u>ಆಪಾಧನೆ</u>

## <u>ಶ್ರೀ.ಸುಮನ ಚಿತ್ತರಗಿ, ಅಪರ ನ್ಯಾ.ದಂ.ಗಳು, ಆಳಂದ ನಾನು ನಿಮ್ಮ ವಿರುದ್ಧ ಈ ಕೆಳಕಾಣಿಸಿದ ಅಪಾದನೆಗಳನ್ನು ರೂಪಿಸುತ್ತಿದ್ದೇನೆ.</u>

ಆಳಂದ ವ್ಯಾಪ್ತಿಗೆ ಒಳಪಡುವ ನರೋಣಾ ಪೋಲಿಸ ಠಾಣೆಯ ಹದ್ದಿಯ ಪೈಕಿ ನರೋಣಾ ರಿಂದ ಸೈಯದ್ ಚಿಂಚೋಳಿ ಕಡೆಗೆ ಹೋಗುವ ಮಾರ್ಗ ಮದ್ಯ ಗೋಳಾ ಕ್ರಾಸ ಹತ್ತಿರ ಇರುವ ಸೋಲಾರ ಪವರ್ ಪ್ಲಾಂಟ್ ಹತ್ತಿರದ ರೋಡಿನ ಮೇಲೆ ದಿಃ 21.03.2023 ರಂದು ಬೆಳಿಗ್ಗೆ 9.00 ಗಂಟೆಗೆ 1ನೇ ಆರೋಪಿತನಾದ ನೀವು 2ನೇ ಆರೋಪಿತರವರ ಹೇಸರಿನ ಮೇಲೆ ಇರುವ ಬಿಳಿ ಮತ್ತು ನೀಲಿ ಬಣ್ಣದಿಂದ ಕೂಡಿದ ಡಿಯೋ ಮೋಟಾರ ಸೈಕಲ್ ನಂ.ಕೆಎ.32.ಇ.ಯೂ.3919 ನೇದ್ದರ ಮೇಲೆ ನಿಮ್ಮ ಬಳಿ ವಾಹನ ಚಾಲನ ಪರವಾನಿಗೆ ಪತ್ರ ಇಲ್ಲದಿದ್ದರು ಕೂಡ ನಿಮ್ಮ ಹೆಂಡತಿಯಾದ ರಜೀಯಾ @ ರಜೀಯಾಬಿ ಗಂಡ ಸೈಯದ್ ದಸ್ತಗಿರಿ ಇವರನ್ನು ಕೂಡಿಸಿಕೊಂಡು ನರೋಣಾ ದಿಂದ ಕಲಬುರಗಿಗೆ ಹೋಗುವಾಗ ಮೋಟಾರ ಸೈಕಲನ್ನು ಅತಿವೇಗವಾಗಿ ಮತ್ತು ಅಲಕ್ಷತನದಿಂದ ಚಲಾಯಿಸುತ್ತಾ ರಸ್ತೆ ಬದಿಯಲ್ಲಿರುವ ತಗ್ಗಿನಲ್ಲಿ ಮೋಟಾರ ಸೈಕಲ್ ಹಾಯ್ಸಿದ್ದರಿಂದ ರಜೀಯಾ @ ರಜೀಯಾಬಿ ಗಂಡ ಸೈಯದ್ ದಸ್ತಗಿರಿ ಇವರಿಗೆ ತಲೆಗೆ ಭಾರಿ ರಕ್ತ ಗಾಯ ಮತ್ತು ಗುಪ್ತಗಾಯವಾಗಿ ಕಿವಿಯಿಂದ ರಕ್ತ ಸ್ರಾವವಾಗಿದ್ದು ಉಪಚಾರ ಕುರಿತು ಎ.ಎಸ್.ಎನ್. ಆಸ್ಪತ್ರೆ ಕಲಬುರಗಿಯಲ್ಲಿ ಸೇರಿಕೆ ಮಾಡಿದಾಗ ದಿಃ 22.03.2023 ರಂದು ರಾತ್ರಿ 9.00 ಗಂಟೆ ಸುಮಾರಿಗೆ ರಜೀಯಾ @ ರಜೀಯಾಬಿ ಗಂಡ ಸೈಯದ್ ದಸ್ತಗಿರಿ ಅವರು ಆಸ್ಪತ್ರೆಯಲ್ಲಿಯೇ ಮೃತಪಟ್ಟಿದ್ದು, ಅದ್ದುದ್ದರಿಂದ ನೀವು ಕಲಂ 279, 304(ಎ) ಐ.ಪಿ.ಸಿ. ಮತ್ತು ಕಲಂ 181 ಐ.ಎಮ್.ವಿ. ರ ಕಾಯ್ದೆ ಪ್ರಕಾರ ಅಪರಾದವೇಸಗಿದ್ದಿರಿ ಎಂದು ಅಪಾಧಿಸಲಾಗಿದೆ, ಈ ಮೇರೆಗೆ ನೀವೇನು ಹೇಳುತ್ತೀರಿ.

ಪ್ರಶ್ನೆ ಃ ಈ ಮೇಲೆ ಒದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರಃ ಆ.1:

ಆ.2:(Split-Up)

ಪ್ರಶ್ನೆ ಃ ಸದರ ಆಪಾದನೆಗೆ ನೀನು ಒಪ್ಪುತ್ತಿಯಾ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ ಆ.1:

ಆ.2:(Split-Up)

(ಆರೋಪಿಗೆ ಆಪಾದನೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಒದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡು ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು)

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ ಎಫ್ ಸಿ**

**ನ್ಯಾಯಾಲಯ, ಆಳಂದ.**